ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ** **ಸರ್ವ ಶಿಕ್ಷಣ ಅಭಿಯಾನ**

# MATHEMATICS OLYMPIAD 2013-14

ಗಣಿತ ವಿಷಯದ ಸಾಮರ್ಥ್ಯಗಳ ವಿವರ ತರಗತಿ– 9

| ಕ್ರ.ಸಂ | ವಿಷಯ | ಕಲಿಕಾಂಶಗಳು | ಸಾಮರ್ಥ್ಯಗಳು |
|---|---|---|---|
| 1 | ಸಂಖ್ಯಾಪದ್ಧತಿ | 1. ಸ್ವಾಭಾವಿಕ ಸಂಖ್ಯೆಗಳು ಪೂರ್ಣ ಸಂಖ್ಯೆಗಳು, ಪೂರ್ಣಾಂಕಗಳು, ಭಾಗಲಬ್ಧ ಸಂಖ್ಯೆಗಳು, ಅಭಾಗಲಬ್ಧ ಸಂಖ್ಯೆಗಳು, ವಾಸ್ತವಿಕ ಸಂಖ್ಯೆಗಳು<br>2. ಭಾಜ್ಯ ಮತ್ತು ಅವಿಭಾಜ್ಯ ಸಂಖ್ಯೆಗಳು<br>3. ಗಣ ಕ್ರಿಯೆಗಳು ಮತ್ತು ಲಕ್ಷಣಗಳು | 1. ವಿವಿಧ ಸಂಖ್ಯೆಗಳ ಮೂಲ ಗುಣಗಳನ್ನು ಪರಿಶೀಲಿಸುವವರು.<br>2. ಭಾಜ್ಯ ಸಂಖ್ಯೆಗಳ ಮೇಲೆ ಅಂಕಗಣಿತ ಕ್ರಿಯೆಗಳನ್ನು ನಿರ್ವಹಿಸುವರು.<br>3. ಭಾಜ್ಯ ಮತ್ತು ಅವಿಭಾಜ್ಯ ಸಂಖ್ಯೆಗಳನ್ನು ಹೋಲಿಸುವರು ಮತ್ತು ವ್ಯತ್ಯಾಸಗಳನ್ನು ಗುರುತಿಸುವರು.<br>4. ಗಣಗಳ ಕ್ರಿಯೆಗಳು ಮತ್ತು ಅವುಗಳ ಲಕ್ಷಣಗಳನ್ನು ವೆನ್ ನಕ್ಷೆ ಮೂಲಕ ಸೂಚಿಸುವರು.<br>5. ಸಂಖ್ಯೆಗಳಿಗೆ ಸಂಬಂಧಿಸಿದ ಮಾಯಾ ಚೌಕಗಳನ್ನು ರಚಿಸುವರು ಮತ್ತು ವಿವಿಧ ಸಂಖ್ಯಾ ಆಟಗಳಲ್ಲಿನ ಸಾಮಾನ್ಯ ನಿಯಮವನ್ನು ಗುರುತಿಸುವರು. |
| 2 | ವರ್ಗಮೂಲ ಮತ್ತು ಘನಮೂಲ | 1. ವರ್ಗಗಳು<br>2. ಘನಗಳು<br>3. ವರ್ಗಮೂಲ<br>4. ಘನಮೂಲ | 1. ವರ್ಗ, ಘನ, ವರ್ಗಮೂಲ ಮತ್ತು ಘನಮೂಲಗಳನ್ನು ವಿವಿಧ ವಿಧಾನಗಳಿಂದ ಕಂಡುಹಿಡಿಯುವರು<br>2. ಪೂರ್ಣ ವರ್ಗ ಸಂಖ್ಯೆಯ ಬಿಡಿ ಸ್ಥಾನದಲ್ಲಿ ಬರುವ ಅಂಕಿಗಳನ್ನು ಗುರುತಿಸುವರು.<br>3. ಪೂರ್ಣ ವರ್ಗವಲ್ಲದ ಸಂಖ್ಯೆಗಳಿಗೆ ಕನಿಷ್ಠ ಸಂಖ್ಯೆಯನ್ನುಕೂಡಿಸುವುದು ಮತ್ತು ಕಳೆಯುವುದರಿಂದ ಪೂರ್ಣ ವರ್ಗ ಸಂಖ್ಯೆ ಪಡೆಯುವ ಕ್ರಮಗಳನ್ನು ಗ್ರಹಿಸುವರು.<br>4. ವರ್ಗಮೂಲ ಮತ್ತು ಘನಮೂಲಗಳನ್ನುಅಂದಾಜಿಸುವರು. |
| 3 | ವಾಣಿಜ್ಯಗಣಿತ | 1. ಶೇಕಡಾ ಲಾಭ ಮತ್ತು ನಷ್ಟ<br>2. ರಿಯಾಯಿತಿ<br>3. ದಲ್ಲಾಳಿ<br>4. ಸರಳ ಬಡ್ಡಿ<br>5. ತೆರಿಗೆ<br>6. ಮೌಲ್ಯ ವರ್ಧಿತ ತೆರಿಗೆ (VAT) | 1. ಶೇಕಡಾ ಲಾಭ ಮತ್ತು ನಷ್ಟ, ದಲ್ಲಾಳಿ ಮತ್ತು ರಿಯಾಯಿತಿ ಇವುಗಳ ಸೂತ್ರಗಳನ್ನು ಉಪಯೋಗಿಸಿ ಹೇಳಿಕೆ ರೂಪದ ಸಮಸ್ಯೆಗಳನ್ನು ಬಿಡಿಸುವರು.<br>2. ಸರಳ ಬಡ್ಡಿಯ ಸೂತ್ರವನ್ನು ಬಳಸಿ ವಿವಿಧ ಅಂಶಗಳನ್ನು ಲೆಕ್ಕ ಮಾಡುವರು.<br>3. ತೆರಿಗೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸಲು ಸೂಕ್ತ ಸೂತ್ರಗಳನ್ನು ಆಯ್ಕೆ ಮಾಡಿಕೊಳ್ಳುವರು<br>4. ವಾಣಿಜ್ಯ ವ್ಯವಹಾರದಲ್ಲಿVAT ನ್ನು ವಿವಿಧ ಸಂದರ್ಭಗಳಲ್ಲಿ ಲೆಕ್ಕ ಮಾಡುವರು. |
| | ಸಂಖ್ಯಾಶಾಸ್ತ್ರ | 1. ಸರಾಸರಿ<br>2. ಮಧ್ಯಾಂಕ<br>3. ಬಹುಲಕ (ರೂಢಿಬೆಲೆ) | 1) ಕೇಂದ್ರೀಯ ಪ್ರವೃತಿ ಅಳತೆಗಳಾದ ಸರಾಸರಿ, ಮಧ್ಯಾಂಕ ಮತ್ತು ಬಹುಲಕ, ಇವುಗಳನ್ನು ಉಪಯೋಗಿಸುವ ವಿವಿಧ ಸಂದರ್ಭಗಳನ್ನು ವಿಶ್ಲೇಷಿಸುವರು.<br>2) ವರ್ಗೀಕೃತ ಮತ್ತು ಅವರ್ಗೀಕೃತ ದತ್ತಾಂಶಗಳಿಗೆ ಸರಾಸರಿ, ಮಧ್ಯಾಂಕ ಮತ್ತು ಬಹುಲಕಗಳನ್ನು ಲೆಕ್ಕಾಚಾರ ಮಾಡುವರು |
| 4 | ಅಪವರ್ತಿಸುವಿಕೆ | 1. ಸಾಮಾನ್ಯ ಪದವನ್ನುತೆಗೆಯುವ ವಿಧಾನ<br>2. ಗುಂಪು ವಿಂಗಡನೆಯ ವಿಧಾನ<br>3. ಮಧ್ಯಪದ ವಿಂಗಡನೆಯ ವಿಧಾನ<br>4. ನಿತ್ಯ ಸಮೀಕರಣಅನ್ವಯಿಸುವ ವಿಧಾನ | 1) ಸೂಕ್ತ ವಿಧಾನವನ್ನು ಬಳಸಿ ಬಹುಪದ ಬೀಜೋಕ್ತಿಗಳನ್ನು ಅಪವರ್ತಿಸುವರು. |

| ಕ್ರ.ಸಂ | ವಿಷಯ | ಕಲಿಕಾಂಶಗಳು | ಸಾಮರ್ಥ್ಯಗಳು |
|---|---|---|---|
| 5 | ಬಹುಪದ ಬೀಜೋಕ್ತಿಗಳ ಗುಣಾಕಾರ | 1. ಏಕಪದದಿಂದಏಕಪದಗುಣಿಸುವುದು.<br>1. ಏಕ ಪದದಿಂದ ದ್ವಿಪದಗುಣೀಸುವುದು.<br>2. ದ್ವಿಪದದಿಂದ ದ್ವಿಪದಗುಣಿಸುವುದು.<br>3. ವಿಶೇಷ ಗುಣಲಬ್ಧಗಳು | 1. ಬೀಜ ಪದಗಳ ಗುಣಲಬ್ಧವನ್ನುಕಂಡುಹಿಡಿಯಲು ಸೂಕ್ತವಾದ ಸೂತ್ರಗಳನ್ನು ಉಪಯೋಗಿಸುವರು.<br>2. ವಿವಿಧರೀತಿಯ ಬೀಜೋಕ್ತಿಗಳ ಗುಣಲಬ್ಧವನ್ನು ವಿವಿಧ ಕ್ರಮ ಅನುಸರಿಸಿ ಕಂಡುಹಿಡಿಯುವರು. |
| 6 | ಸಮತಲಾಕೃತಿಗಳು | 1. ತ್ರಿಭುಜ, ಬಾಹು ಮತ್ತು ಕೋನಗಳಿಗೆ ಸಂಬಂಧಿಸಿದ ಗುಣಲಕ್ಷಣಗಳು.<br>2. ತ್ರಿಭುಜದ ಹೊರಕೋನಕ್ಕೆ ಸಂಬಂಧಿಸಿದ ಗುಣಲಕ್ಷಣಗಳು<br>3. ತ್ರಿಭುಜಗಳ ಸರ್ವಸಮತೆ<br>4. ಪೈಥಾಗೋರಸ್‌ನ ಪ್ರಮೇಯ<br>5. ಚತುರ್ಭುಜಗಳು ಮತ್ತು ಲಕ್ಷಣಗಳು.<br>6. ಬಹುಭುಜಾಕೃತಿಯವಿಧಗಳು<br>7. ಬಹುಭುಜಾಕೃತಿಯ ಒಳಕೋನ ಮತ್ತು ಹೊರಕೋನಗಳು. | 1. ತ್ರಿಭುಜದ ಗುಣಲಕ್ಷಣಗಳನ್ನು ಆಧರಿಸಿದ ಸಮಸ್ಯೆಗಳನ್ನು ಪರಿಹರಿಸುವರು.<br>2. ತ್ರಿಭಜಗಳ ಸರ್ವಸಮತೆಗೆ ಸಂಬಂಧಿಸಿದ ಸಿದ್ಧಾಂತಗಳನ್ನು ಅನ್ವಯಿಸಿ ಸಮಸ್ಯೆಗಳನ್ನು ಬಿಡಿಸುವರು.<br>3. ಚತುರ್ಭುಜದ ವಿಧಗಳನ್ನು ಹೋಲಿಸುವರು, ವರ್ಗೀಕರಿಸುವರು ಮತ್ತು ವ್ಯತ್ಯಾಸಕಂಡು ಹಿಡಿಯುವರು.<br>4. ಬಹುಭುಜಾಕೃತಿಗಳನ್ನು ಲಕ್ಷಣಗಳಿಗನುಸಾರವಾಗಿ ಪತ್ತೆ ಹಚ್ಚುವರು ಮತ್ತು ವರ್ಗೀಕರಿಸುವರು.<br>5. ವಿವಿಧ ಬಾಹುಗಳನ್ನು ಹೊಂದಿರುವ ಬಹುಭುಜಾಕೃತಿಯ ಒಳಕೋನ ಮತ್ತು ಹೊರಕೋನಗಳನ್ನು ಕಂಡುಹಿಡಿಯುವರು. |
| 7 | ಕ್ಷೇತ್ರಗಣಿತ | 1) ಸಮತಲಾಕೃತಿಗಳ ಸುತ್ತಳತೆ ಮತ್ತು ವಿಸ್ತೀರ್ಣ<br>2) ಘನ ಮತ್ತು ಆಯತಘನದ ಮೇಲ್ಮೈ ವಿಸ್ತೀರ್ಣ ಮತ್ತು ಘನಫಲ | 1) ಸಾಮಾನ್ಯೀಕರಣಗಳ ಮೂಲಕ ಸಮತಲಾಕೃತಿಗಳ ಸುತ್ತಳತೆ ವಿಸ್ತೀರ್ಣಗಳನ್ನು ಕಂಡುಹಿಡಿಯುವ ಸೂತ್ರಗಳನ್ನುನಿರೂಪಿಸುವರು ಮತ್ತು ಲೆಕ್ಕಾಚಾರ ಮಾಡಲು ಬಳಸುವರು<br>2) ಘನ ಮತ್ತು ಆಯತಘನದ ಕ್ಷೇತ್ರಫಲ ಮತ್ತು ಘನಫಲವನ್ನು ವಿವಿಧ ಸಂದರ್ಭಗಳಲ್ಲಿ ನಿರ್ಧರಿಸಲು ಸೂಕ್ತವಾದ ತಂತ್ರವನ್ನು ಅನುಸರಿಸುವರು |
| 8 | ಘಾತಾಂಕಗಳು | 1) ಘಾತಸಂಖ್ಯೆ ಮತ್ತು ಸಂಬಂಧಿಸಿದ ಪದಗಳು<br>2) ಘಾತಾಂಕದ ನಿಯಮಗಳು<br>3) ಘಾತಾಂಕಗಳಅನ್ವಯ | 1) ಘಾತಾಂಕರೂಪದಲ್ಲಿ ಕೊಟ್ಟಿರುವ ವಾಸ್ತವಿಕ ಸಂಖ್ಯೆಗಳ ಬೆಲೆಯನ್ನುಕಂಡು ಹಿಡಿಯುವರು<br>2) ಸಂಖ್ಯಾಪದೋಕ್ತಿಗಳನ್ನು ವಿವಿಧಘಾತಾಂಕ ನಿಯಮಗಳನ್ನು ಬಳಸಿ ಬಿಡಿಸುವರು |
| 9 | ಸಮೀಕರಣಗಳು | 1) ಸರಳ ಸಮೀಕರಣ<br>2) ಒಂದು ಚರಾಕ್ಷರವುಳ್ಳ ಸರಳ ಸಮೀಕರಣ ಬಿಡಿಸುವುದು<br>3) ಸರಳ ರೇಖಾತ್ಮಕ ಸಮೀಕರಣಗಳ ಉಪಯೋಗಗಳು | 1) ಸರಳ ಸಮೀಕರಣಗಳನ್ನು ಸಾಮಾನ್ಯರೂಪಕ್ಕೆ ಪರಿವರ್ತಿಸುವರು.<br>2) ಸರಳ ಸಮೀಕರಣಗಳ ಸಾಮಾನ್ಯರೂಪವನ್ನು ಆಧರಿಸಿದ ಸಮಸ್ಯೆಗಳನ್ನು ಬಿಡಿಸುವರು<br>3) ನಿತ್ಯಜೀವನದಲ್ಲಿ ಬರುವ ಸಮಸ್ಯೆಗಳನ್ನು ಸರಳ ಸಮೀಕರಣದರೂಪಕ್ಕೆ ಪರಿವರ್ತಿಸಿ ಬಿಡಿಸುವರು |
| 10 | ಮ.ಸಾ.ಅ ಮತ್ತು ಲ.ಸಾ.ಅ | 1) ಮ.ಸಾ.ಅ<br>2) ಲ.ಸಾ.ಅ<br>3) ಹೇಳಿಕೆ ರೂಪದ ಸಮಸ್ಯೆಗಳು | 1) ಸಂಖ್ಯೆಗಳ/ಬೀಜೋಕ್ತಿಗಳ ಮ.ಸಾ.ಅ ಮತ್ತು ಲ.ಸಾ.ಅ ಕಂಡು ಹಿಡಿಯುವುದು<br>2) ಮ.ಸಾ.ಅ ಮತ್ತು ಲ.ಸಾ.ಅ ವನ್ನೊಳಗೊಂಡ ಸಮಸ್ಯೆಗಳನ್ನು ಪರಿಹರಿಸುವರು |